**ದಿ:19.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲು:-**ವಾದಿ ಪರ ಶ್ರೀ.**K.B.,** ವಕೀಲರಿಂದ:-

ನಾನು ಎಸ್‌ಎಸ್‌ಎಲ್‌ಸಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ವ್ಯವಸಾಯ ಮಾಡುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ ಮಾಹಿತಿಯನ್ನು ಯಾರು ಹೇಳಿ ಬರೆಸಿರುತ್ತೇನೆ . ನನಗೆ ಈ ದಾವೆಯ ವಾದಿ ಮತ್ತು ಪ್ರತಿವಾದಿಗಳು ಇಬ್ಬರು ಪರಿಚಯ ಇರುತ್ತಾರೆ ಅವರು ನಮ್ಮ ಊರಿನವರೇ . ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಇರುವ ಮಾಹಿತಿ ಬಗ್ಗೇ ನನಗೆ ತಿಳಿದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಹೆಸರು ನಿಂಗಪ್ಪ ಇರುತ್ತದೆ . ಪ್ರತಿವಾದಿ 7 ರವರ ಅಮ್ಮನ ತಂದೆ ಹೆಸರು ಗುಹೇಶ್ವರಪ್ಪ ಇರುತ್ತದೆ ಎಂದರೆ ಸರಿ. ನಮ್ಮ ತಂದೆ ಮತ್ತು ಸದರಿ ಗುಹೇಶ್ವರಪ್ಪ ರವರು ಒಂದೇ ತಾಯಿಯ ಮಕ್ಕಳು ಇರುತ್ತಾರೆ ಎಂದರೆ ಸರಿ. ನಾನು ಪ್ರತಿವಾದಿ 7 ರವರು ನನಗೆ ಅಳಿಯ ಆಗಬೇಕು ಎಂದರೆ ಸಾಕ್ಷಿ ನಮ್ಮ ಊರಿನವರು ಆಗಬೇಕ ಎಂದು ಹೇಳುತ್ತಾರೆ . ನನ್ನ ತಮ್ಮನ ಮಗಳನ್ನು ಪ್ರತಿವಾದಿ 7 ರವರು ಮದುವೆ ಆಗಿರುತ್ತಾರೆ ಎಂದರೆ ಸರಿ. ದೊಡ್ಡಪ್ಪ ರವರಿಗೆ ಒಟ್ಟು 4 ಜನ ಮಕ್ಕಳು ಇರುತ್ತಾರೆ . ಅವರ ಹೆಸರು ಸಂಗಪ್ಪ , ಬಸಪ್ಪ , ಚನ್ನಬಸಪ್ಪ ಮತ್ತು ನಾಗಲಿಂಗಪ್ಪ ಇರುತ್ತಾರೆ . ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಹಾಗೆ ವಾದಿ ಮತ್ತು ಪ್ರತಿವಾದಿಗಳು ಸುಮಾರು 60 ವರ್ಷಗಳ ಹಿಂದ ಮೌಖಿಕವಾಗಿ ಪಾಲುವಿಭಾಗದ ವಿಚಾರದ ಬಗ್ಗ ಗೋತ್ತಿಲ್ಲ ಎಂದರೆ ಸಾಕ್ಷಿ ಅವರವರ ತಂದೆಗೆ ಬಂದ ಆಸ್ತಿಗಳನ್ನು ಅನುಭವಿಸಿಕೊಂಡು ಬಂದಿರುತ್ತಾರೆ . ನನಗೆ ವಾದಿ ಮತ್ತು ಪ್ರತಿವಾದಿಯರ ತಂದೆಯವರಿಗೆ ಎಷ್ಟು ಪಾಲು ವಿಸ್ತೀರ್ಣ ಬಂದಿರುತ್ತದೆ ಎಂದು ತಿಳಿದಿರುವುದಿಲ್ಲ . ದಾವಾ ಆಸ್ತಿಯನ್ನು ಬಿಟ್ಟು ವಾದಿ ಮತ್ತು ಪ್ರತಿವಾದಿಗಳ ತಂದೆಯವರು ಪಾಲುವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ

ಆಸ್ತಿಯಲ್ಲಿ ಕಣ ಇದ್ದು ದೊಡ್ಡಪ್ಪ ರವರ **4** ಜನ ಮಕ್ಕಳು ಸ್ವಾಧೀನ ಇರುತ್ತಾರೆ ಎಂದರೆ ಸರಿಯಲ್ಲ. ಅವರು ಸುಮಾರು 70 ವರ್ಷದಿಂದ ಸ್ವಾಧೀನ ಇದ್ದು , ಅನುಭವ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಪಹಣಿಯು ಪ್ರತಿವಾದಿ 7 ರವರ ಹೆಸರಿಗೆ ಇರುತ್ತದೆ , ನಾನು ಸದರಿ ಪಹಣಿ ಪತ್ರಿಕೆಯನ್ನು ನೋಡಿರುತ್ತೇನೆ . ನಾನು ಪ್ರತಿವಾದಿ 7 ರವರು ದಾವಾ ಆಸ್ತಿ ಸ್ವಾಧೀನ ಇರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 7 ರವರು ಕಂದಾಯ ಕಟ್ಟಿರುವುದಿಲ್ಲ , ವಾದಿಗಳೇ ದಾವಾ ಆಸ್ತಿಕ್ಕೆ ಕಟ್ಟಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ವಾದಿಗಳು ತಾವು ಬೆಳದ ಮೆಕ್ಕ ಜೋಳ ಬೆಳೆಯನ್ನು ದಾವಾ ಆಸ್ತಿ ಕಣವಾಗಿ ಬಳಸಿಕೊಂಡು ಶೇಖರಣೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಗಳಿಗೆ ದಾವಾ ಆಸ್ತಿ ಯಲ್ಲಿ ಸೇರಿದ 7 ½ ಗುಂಟೆ ಕಣದ ಚೆಕ್ ಬಂದಿ ಪೂರ್ವಕ್ಕೆಃ ನಾಗಪ್ಪ ಶೇಖರಪ್ಪ ರವರ ಜಮೀನು ಎಂದರೆ ಸರಿ. , ಪಶ್ಚಿಮಕ್ಕೆಃ ರಸ್ತೆ ಮತ್ತು ಹೆಚ್ ಜಿ ಮಂಜುನಾಥ ಜಮೀನು ಎಂದರೆ ಸರಿ. , ಉತ್ತರಕ್ಕೆಃ ಎಂ ಸಿ ಬಸವರಾಜಪ್ಪ ರವರ ಜಮೀನು ಎಂದರೆ ಸರಿ. ಮತ್ತು ದಕ್ಷಿಣಕ್ಕೆಃ ಸಂಗಪ್ಪರವರ ಜಮೀನು ಇರುತ್ತದೆ ಎಂದರೆ ಸಾಕ್ಷಿ ಪ್ರತಿವಾದಿ 7 ರವರ ಜಮೀನು ಇರುತ್ತದೆ ಎಂದು ಹೇಳುತ್ತಾರೆ . ವಾದಿಗೆ ಸಂಬಂದಿದ ಹಾಗೆ ಹುಣಸೆ ಮರ ಮತ್ತು ತಿಪ್ಪೇ ದಾವಾ ಆಸ್ತಿಯಲ್ಲಿ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿ 30 ಗುಂಟೆ ಚೆಕ್ ಬಂದಿ ಪೂರ್ವಕ್ಕೆಃ ಸುಮಿತ್ರಮ್ಮ ಮತ್ತು ಬಸವರಾಜಪ್ಪ ಜಮೀನು , ಪಶ್ಚಿಮಕ್ಕೆಃ ಹೆಚ್ ಜಿ ಮಂಜುನಾಥ ಜಮೀನು , ಉತ್ತರಕ್ಕೆಃ ಎಂ ಸಿ ಬಸವರಾಜ್ ಮತ್ತು ದಕ್ಷಿಣಕ್ಕೆಃ ಪ್ರತಿವಾದಿ 7 ರವರ ಜಮೀನು ಇರುತ್ತದೆ . ದೊಡ್ಡಪ್ಪ ನ ನಾಲ್ಕು ಜನ ಮಕ್ಕಳು ದಾವಾ ಆಸ್ತಿಯಲ್ಲಿ ತಲಾ 7 ½ ಗುಂಟೆ ಹಂಚಿಕೊಂಡು ಸುಮಾರು 70 ವರ್ಷದಿಂದ ಸ್ವಾಧೀನ ಅನುಭವ ಇರುತ್ತಾರೆ ಎಂದರೆ ಸರಿಯಲ್ಲ. ವಾದಿಗಳು ದಾವಾ ಆಸ್ತಿಯಲ್ಲಿ ಮೆಕ್ಕಜೋಳ , ಟ್ರಾಕ್ಟರ್ ನಿಲ್ಲಿಸಿಕೊಂಡು ಸ್ವಾಧೀನ ಇರುತ್ತಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಮಾಹಿತಿ ನನಗೆ ಗೋತ್ತಿಲ್ಲದಿದ್ದರು ಸಹ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೌಖಿಕ ಪಾಲುವಿಭಾಗ ನಂತರ ವಾದಿಗಳು ತಮ್ಮ ಹಿಸ್ಸೆಯಲ್ಲಿ ಸ್ವಾಧೀನ ಇರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ **7** ರವರು ದಾವಾ ಆಸ್ತಿಯಲ್ಲಿ ಸ್ವಾಧೀನ

ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿ 7 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು, ಜಗಳೂರು